# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 30.10.2018ರಂದು 4.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಡಿ.ಶಿವಲಿಂಗಯ್ಯ ರವರ ಅಧ್ಯಕ್ಷತೆಯಲ್ಲಿ ನಡೆದ **ವಿಶೇಷ** ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಡಿ. ಶಿವಲಿಂಗಯ್ಯ**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ,<br>ಮೈಸೂರು. |
| **ಪ್ರೊ. ಜಗದೀಶ**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಪ್ರೊ. ಡಿ.ಚಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಪ್ರೊ. ಎ. ರಂಗಸ್ವಾಮಿ**<br>ಕುಲಸಚಿವ (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಡಾ॥ ಲಕ್ಷ್ಮಿ.ಎನ್**<br>ಮುಖ್ಯಸ್ಥರು, ಶಿಕ್ಷಣ ಶಾಸ್ತ್ರ ವಿಭಾಗ ಹಾಗೂ ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು | |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

30/10

ಕುಲಸಚಿವರು

ಕುಲಪತಿಗಳು

30/10

**ವಿಷಯ ಸಂಖ್ಯೆ : 01**

**ವಿಷಯ**: Doctor of Philosophy ಆಧ್ಯಾದೇಶ 2016ಡಿ ಆಧ್ಯಾದೇಶಗಳನ್ನು ಸಿದ್ಧಪಡಿಸಿರುವ ಬಗ್ಗೆ

*****

ಕ.ರಾ.ಮು.ವಿ Doctor of Philosophy ಆಧ್ಯಾದೇಶ 2012 ಮಾನ್ಯ ಕುಲಾಧಿಪತಿಗಳಿಂದ ದಿನಾಂಕ: 21.06.2012 ರಂದು ಅಂಕಿತಗೊಂಡು ಜಾರಿಗೆ ಬಂದಿರುತ್ತದೆ.

ಯು.ಜಿ.ಸಿ. ಯ 2016 ರ ವಿನಿಮಯದಂತೆ Ph.D. Programme ಅನ್ನು Regular Mode ನಲ್ಲಿಯೇ ಮಾಡಬೇಕಾಗಿದ್ದು ಈ ಬಗ್ಗೆ ಪರಿಷ್ಕೃತ ವಿಧಾನಗಳನ್ನು ಅಳವಡಿಸಲು ನಿರ್ದೇಶಿಸಲಾಗಿರುತ್ತದೆ.

ಕ.ರಾ.ಮು.ವಿ ಕಾಯ್ದೆಯ ಅಧಿನಿಯಮ 24(2) ರ ಪ್ರಕಾರ ಈಗಾಗಲೇ ರಚಿಸಲಾದ ಆಧ್ಯಾದೇಶವನ್ನು ವ್ಯವಸ್ಥಾಪನಾ ಮಂಡಳಿಯು ಯಾವುದೇ ಕಾಲದಲ್ಲಿ ತಿದ್ದುಪಡಿ ಅಥವಾ ಅದಕ್ಕೆ ಸೇರ್ಪಡೆ ಮಾಡಲು ಅಧಿಕಾರ ಹೊಂದಿರುತ್ತದೆ.

ಆದ್ದರಿಂದ ಈಗಾಗಲೇ ರಚಿಸಲಾದ Ph.D Programme ಆಧ್ಯಾದೇಶಕ್ಕೆ ಯುಜಿಸಿಯ 2016ರ ವಿನಿಯಮದಂತೆ ತಿದ್ದುಪಡಿ / ಸೇರ್ಪಡೆಗೊಳಿಸಿ ರಚಿಸಲಾದ Doctor of Philosophy ಆಧ್ಯಾದೇಶದ ಕರಡನ್ನು ವಿದ್ಯಾವಿಷಯಕ ಪರಿಷತ್‌ನ ಅನುಮೋದನೆಗೆ ಮಂಡಿಸಿದೆ.

**ತೀರ್ಮಾನ : ಅನುಮೋದಿಸಲಾಯಿತು.**

-----

**ವಿಷಯ ಸಂಖ್ಯೆ : 02**

**ವಿಷಯ** : ಸರ್ಟಿಫಿಕೇಟ್, ಡಿಪ್ಲೊಮ ಮತ್ತು ಪಿ.ಜಿ. ಡಿಪ್ಲೊಮ ಕೋರ್ಸುಗಳಿಗೆ ಆಧ್ಯಾದೇಶಗಳನ್ನು ಪುನರ್ ಸಂರಚಿಸಿರುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ 2017 ರ ನಿಯಮದಂತೆ ಸರ್ಟಿಫಿಕೇಟ್, ಡಿಪ್ಲೊಮ ಮತ್ತು ಪಿ.ಜಿ. ಡಿಪ್ಲೊಮ ಕೋರ್ಸುಗಳನ್ನು 2018-19ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಬೇಕಾಗಿರುತ್ತದೆ. ಈ ಕೋರ್ಸುಗಳ ಪ್ರವೇಶಾತಿ ಅರ್ಹತೆಗಳು, ಕ್ರೆಡಿಟ್‌ಗಳು, ಕೋರ್ಸುಗಳ ಸಂಖ್ಯೆ, ಅವಧಿ, ಸಂಪರ್ಕ ಕಾರ್ಯಕ್ರಮ, ಮೌಲ್ಯಮಾಪನ, ಪರೀಕ್ಷೆ ನಡೆಸುವ ಬಗ್ಗೆ ಸಮಗ್ರವಾಗಿ ಅಭ್ಯಾಸಮಾಡಿ ವರದಿ ನೀಡಲು ಮಾನ್ಯ ಕುಲಪತಿಗಳು ಡೀನ್ (ಶೈಕ್ಷಣಿಕ) ರವರ ನೇತೃತ್ವದಲ್ಲಿ ಸಮಿತಿ ರಚಿಸಿದರು,

ಸಮಿತಿಯು ದಿನಾಂಕ: 01-10-2018 ರಂದು ಸಭೆ ನಡೆಸಿ ಸದರಿ ಕೋರ್ಸುಗಳ ಅಗತ್ಯ ಮಾರ್ಪಾಡುಗಳನ್ನು ಮಾಡಿ ಅಧ್ಯಾದೇಶಗಳನ್ನು ಸಿದ್ಧಪಡಿಸಿ ಮಾನ್ಯ ಕುಲಪತಿಗಳಿಗೆ ಸಲ್ಲಿಸಿ ದಿನಾಂಕ: 27-10-2018 ರಂದು ಅನುಮೋದನೆ ಪಡೆಯಲಾಗಿರುವುದು. ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಕೋರಿದೆ.

ತೀರ್ಮಾನ : ಅನುಮೋದಿಸಲಾಯಿತು.

-----

30/10

ಕುಲಸಚಿವರು

ಕುಲಪತಿಗಳು 30/10

**ವಿಷಯ ಸಂಖ್ಯೆ : 03**

ವಿಷಯ : ವಾರಾಂತ್ಯ ಸಮಾಲೋಚನೆ / ಸಂಪರ್ಕಕಾರ್ಯಕ್ರಮ ಚಟುವಟಿಕೆಗಳ 2017 ಯು.ಜಿ.ಸಿ ದೂರಶಿಕ್ಷಣ ನಿಯಮಾವಳಿ ಪ್ರಕಾರ ಕಲಿಕಾವಧಿ ನಿಗದಿ ಪಡಿಸಿದ್ದು ಅದಕ್ಕೆ ಅನುಮೋದನೆ ಪಡೆಯುವ ಬಗೆಗೆ.

*****

2017 ಯು.ಜಿ.ಸಿ ದೂರಶಿಕ್ಷಣ ನಿಯಮಾವಳಿ ಪ್ರಕಾರ ವಿಶ್ವವಿದ್ಯಾನಿಲಯದಲ್ಲಿ ಮಾನ್ಯತೆ ಪಡೆದ **ಒಟ್ಟು 31 ಕೋರ್ಸುಗಳಿಗೆ ವಾರಾಂತ್ಯ ಸಮಾಲೋಚನೆ ಮತ್ತು ಸಂಪರ್ಕ ಕಾರ್ಯಕ್ರಮಗಳ** ತರಗತಿಗಳನ್ನು ನಡೆಸಬೇಕಾಗಿರುತ್ತದೆ. ಈ ನಿಯಮಾವಳಿ ಪ್ರಕಾರ ಒಟ್ಟು ಕಲಿಕಾವಧಿಗಳಷ್ಟು Practical 100% ಮತ್ತು Theory 10%, ಮೇಲಿನ ಕಾರ್ಯಕ್ರಮ ನಡೆಸಬೇಕಾಗಿರುವುದು, ಈ ಹಿಂದೆ ಸದರಿ ಕಾರ್ಯಕ್ರಮಗಳು ಅವೈಜ್ಞಾನಿಕವಾಗಿದ್ದು, ನಿಯಮಾವಳಿ ಪ್ರಕಾರ ಇರಲೇಬೇಕು ಎನ್ನುವ ಹಿತದೃಷ್ಟಿಯಿಂದ ಸಮಗ್ರವಾಗಿ ಅಧ್ಯಯನಮಾಡಿ ಶಿಫಾರಸ್ಸು ಮಾಡಲು ಡೀನ್ (ಶೈಕ್ಷಣಿಕ) ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾನ್ಯ ಕುಲಪತಿಗಳು ರಚಿಸಿದ್ದಾರೆ. ಸಮಿತಿ ಸಭೆ ದಿನಾಂಕ: 01–10–2018 ರಂದು ಸೇರಿ ಶಿಫಾರಸ್ಸನ್ನು ಮಾಡಲಾಗಿದೆ.

ಸಮಿತಿ ಮಾಡಲಾಗಿರುವ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಶೈಕ್ಷಣಿಕ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಮಾನ್ಯ ಕುಲಪತಿಗಳು ದಿನಾಂಕ:29–10–2018 ರಂದು ಆದೇಶಿಸಲಾಗಿರುವುದರಿಂದ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿದೆ.

ತೀರ್ಮಾನ : ಅನುಮೋದಿಸಲಾಯಿತು.

-----

**ಅಧ್ಯಕ್ಷರ ಅಪ್ಪಣೆ ಮೇರೆಗೆ ಮಂಡಿಸಲಾದ ಇತರೆ ವಿಷಯಗಳು :**

**2019-20 ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ**

ಶೈಕ್ಷಣಿಕ ಮಂಡಳಿಯ ಸದಸ್ಯರು 2019-20 ಶೈಕ್ಷಣಿಕ ಸಾಲಿಗೆ ಜಾರಿಗೆ ಬರುವಂತೆ ಸ್ನಾತಕ ಮತ್ತು ಸ್ನಾತಕೋತ್ತರ ಕೆಲವು ಹೊಸ ಕೋರ್ಸ್‌ಗಳನ್ನು ಆರಂಭಿಸುವುದು ಸೂಕ್ತ ಎಂದು ಒಮ್ಮತದಿಂದ ಅಭಿಪ್ರಾಯಪಟ್ಟರು. ಈ ಬಗ್ಗೆ ಮಾರುಕಟ್ಟೆಯಲ್ಲಿ ಬೇಡಿಕೆ ಕೆಲವು ಕೋರ್ಸ್‌ಗಳನ್ನು ಪ್ರಾರಂಭಿಸಿದರೆ ವಿಶ್ವವಿದ್ಯಾನಿಲಯದ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ಸಹಾಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಮುಂದುವರೆದು, ಬಿ.ಎಸ್ಸಿ ಕೋರ್ಸ್‌ಗಳಲ್ಲಿ ಕೆಲವು ವಿಷಯಗಳು ಬಹು ಬೇಡಿಕೆ ಇರುತ್ತದೆ. ಬಿ.ಎಸ್ಸಿಯಲ್ಲಿ Physics, Chemistry, Mathematics (P.C.M), Chemistry, Biology ಮತ್ತು Zoology (C.B.Z) ಇದರ ಜೊತೆಗೆ

30/10

ಕುಲಸಚಿವರು

ಕುಲಪತಿಗಳು

30/10

Statistics, Mathematics ಮತ್ತು Computer Science (S.M.C). ಮತ್ತು Bachelor of Social Work (B.S.W).

ಸ್ನಾತಕೋತ್ತರ ಕೋರ್ಸ್‌ಗಳಾದ Master of Social Work (M.S.W), M.Sc (Botany) ಮತ್ತು M.Sc (Zoology) ಆರಂಭಿಸುವುದು ಸೂಕ್ತ ಎಂದು ಅಭಿಪ್ರಾಯಪಡಲಾಯಿತು.

**ತೀರ್ಮಾನ : 2017 ಯು.ಜಿ.ಸಿ. (ದೂರ ಶಿಕ್ಷಣ) ನಿಯಮಾವಳಿ ಪ್ರಕಾರ ಮೇಲಿನ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು 2019-20 ನೇ ಶೈಕ್ಷಣಿಕ ಸಾಲಿನ ನಿಂದ ಆರಂಭಿಸಲು ಅಗತ್ಯವಾದ ಎಲ್ಲಾ ಕ್ರಮ ಕೈಗೊಳ್ಳಲು ಅನುಮೋದಿಸಲಾಯಿತು.**

-----

ಅಂತಿಮವಾಗಿ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸೂಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

30/10 30/10

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** | **ಕುಲಪತಿಗಳು ಹಾಗೂ ಅಧ್ಯಕ್ಷರು**

ಕುಲಸಚಿವರು | ಕುಲಪತಿಗಳು